been in the House of Legislature for quite a long time. I did put a programme and I am sure the hon. Member concerned must have received the programme. All of a sudden, I fell ill one day, and I thought of cancelling the programme. So, I told my P. A. Cancel the programme. I am not well. I do not want to go.' The Member was also informed In the meantime, it was a Public School or College Opening or some such thing-, they got the invitations printed and all that kind of a thing. So. I said: 'Alright, you keep only one day's programme and intimate the programme'. I do not think there is anything wrong in this and there is absolutely no hiding in this. I would like to assure the hon. Members of the House that it shall be our endeavour to take everybody together, to create a greater sense of satisfaction amongst the public at large and do the best possible service, during the course of the five years in which the hon. Members on this side or on that side, will continue as Legislators.

Local Members to accompany the Ministers on Tour.

ಶ್ರೀ ಎನ್. ಹುಚ್ಚಮಾಸ್ತಿಗೌಡ, (ಕಂದಾಯ ಶಾಖೆಯ ಮಂತ್ರಿಗಳು).—ನಾನು ಪ್ರವಾಸ ಕೈಕೊಂಡ ವಿಷಯದ ಬಗ್ಗೆ ಮಾನ್ಯ ಮಾರೇಗೌಡರು ಪ್ರಸ್ತಾಪ ಮಾಡಿದರು. ನಾನು ನೆಲಮಂಗಲದಲ್ಲಿ ಯಾವ ಕಾರ್ಯ ಕ್ರಮವನ್ನು ಸಹ ಇಟ್ಟುಕೊಂಡಿರಲಿಲ್ಲವಾದ್ದರಿಂದ ಮಾನ್ಯ ಸದಸ್ಯರಿಗೆ ಆದನ್ನು ತಿಳಿಸಿರಲಿಲ್ಲ. ನಾನು ಪ್ರವಾಸ ಹೋಗುವಾಗ ದಾರಿಯಲ್ಲಿ ತೋರಣ ಕಟ್ಟಿ ಜನರು ನಿಂತಿದ್ದರು. ಅದನ್ನಾಗಿ ಆಲ್ಲಿ ನಾನು ಸ್ವಲ್ಪ ಕಾಲ ನಿಲ್ಲಬೇಕಾಯಿತು. ಜನರು ಒಂದು ಮನವಿಯನ್ನು ಸಲ್ಲಿಸಿದರು. ಅಷ್ಟೇ ಹೊರತು ಆಲ್ಲಿ ಬೇರೆ ಯಾವ ಕಾರ್ಯಕ್ರಮವೂ ಇರಲಿಲ್ಲ ?

ಶ್ರೀ ಎಚ್. ಮಾರೇಗೌಡ.—ಅಲ್ಲಿ ಕಾರ್ಯಕ್ರಮ ಇಲ್ಲದಿದ್ದರೂ ಎರಡು ಗಂಟೆಗಳ ಕಾಲ ತಾವು ಇದ್ದಿರಿ. ಆದರೂ ತಮ್ಮ ಬಗ್ಗೆ ನಾನೇನು ಆಪಾದನೆ ಮಾಡಿಲ್ಲ, ನಾನು ಆಪಾದನೆ ಮಾಡಿದ್ದು ವಿದ್ಯಾ ಮಂತ್ರಿಗಳ ವಿಚಾರದಲ್ಲಿ.

ಶ್ರೀ ಎಚ್. ಡಿ ದೇವೇಗೌಡ —ಇಂದು ಅಸೆಂಬ್ಲಿ ಚಟುವಟಿಕೆಯಾಗುವುದರಿಂದ ನಾಳೆಯಿಂದ ಮಂತ್ರಿಗಳ ಪ್ರವಾಸ ಪ್ರಾರಂಭವಾಗುತ್ತದೆ. ನಾನು ಈ ಮೊದಲು ಹೆಗ್ಗಡದೇವನಕೋಟೆಯ ವಿಷಯ ವಿತಕ್ಕೆ ಪ್ರಸ್ತಾಪ ಮಾಡಿದೆ ಎಂದರೆ, ಯಾವುದಾದರು ಖಾಸಗೀ ಹೈಸ್ಕೂಲಿನವರಾದರೇ, ತಾಲ್ಲೂಕ್ ಬೋರ್ಡಿನ ಹೈಸ್ಕೂಲಿನವರಾದರೆ, ಆದರ ಮೇನೇಜ್‌ಮೆಂಟ್‌ನವರು ಏನಾದರು ಸಮಾರಂಭ ಏರ್ಪಡಿಸಿದರೆ ಅದಕ್ಕೆ ತಮಗೆ ಇಚ್ಛೆ ಬಂದವರನ್ನು ಆಹ್ವಾನ ಮಾಡಬಹುದು. ಆದರೆ ಒಂದು ಜೂನಿಯರ್ ಕಾಲೇಜನ್ನು ಸರ್ಕಾರದವರೇ ಪ್ರಾರಂಭ ಮಾಡುವಾಗ ಆದರ ಒಪನಿಂಗ್ ಸರಿಮನಿಗೆ ವಿದ್ಯಾ ಇಲಾಖೆಯವರು ಸಂಬಂಧಪಟ್ಟ ಎಂ. ಎಲ್. ಎ. ಆವರನ್ನು ಕರೆಯಬೇಕಾಗುತ್ತದೆ. ಆ ರೀತಿ ಸಂಬಂಧಪಟ್ಟ ಎಂ. ಎಲ್. ಎ. ಯನ್ನು ಬಿಟ್ಟು ಆ ಎಂ. ಎಲ್. ಎ. ಪ್ರತಿಸ್ಪರ್ಧಿಯನ್ನು ಅಂದರೆ ಚುನಾವಣೆಯಲ್ಲಿ ಸೋತವರನ್ನು ಕರೆದರೆ ಆದನ್ನು ಖಂಡಿಸಿ ಮಾಡಬೇಕಾಗುತ್ತದೆ. ಸರ್ಕಾರದ ಮಟ್ಟದಲ್ಲಿ ಯಾವುದಾದರು ಒಂದು ಕಾರ್ಯಕ್ರಮ ನನ್ನು ಸಂಬಂಧಪಟ್ಟ ಎಂ. ಎಲ್. ಎ. ಆನ್ನು ಬಿಟ್ಟು ಮಾಡುವುದಾದರೆ ಆದನ್ನು ಕಟುವಾಗಿ ಟೀಕೆ ಮಾಡ ಬೇಕಾಗುತ್ತದೆ. ಆಂತಹ ಒಂದು ಸಂಪ್ರದಾಯವನ್ನು ಬೆಳೆಸುವುದು ಸರಿಯಲ್ಲ. ಪ್ರಜಾಪ್ರಭುತ್ವದಲ್ಲಿ ಒಂದು ಒಳ್ಳೆಯ ಆರೋಗ್ಯಕರವಾದ ವಾತಾವರಣವನ್ನು ಬೆಳೆಸಬೇಕಾದರೆ ಚುನಾಯಿತ ಪ್ರತಿನಿಧಿಗಳು ಅವರು ಯಾವುದೇ ಪಕ್ಷದವರಾಗಿರಲಿ, ಅವರಿಗೆ ಸಹಕಾರ ಕೊಡತಕ್ಕದ್ದು ಮತ್ತು ಅವರಿಂದ ಸಹಕಾರ ತೆಗೆದುಕೊಳ್ಳತಕ್ಕದ್ದು ಒಳ್ಳೆಯದು. ಈ ಒಂದು ತತ್ವವನ್ನು ಬೆಳೆಸಿಕೊಂಡು ಹೋಗತಕ್ಕದ್ದು ಮತ್ತು ಸರ್ಕಾರದ ಮಟ್ಟದಲ್ಲಿ ಕಾಲೇಜುಗಳನ್ನು ಪ್ರಾರಂಭಮಾಡುವಾಗ ಆದರ ಒಂದು ಸಮಾರಂಭಕ್ಕೆ ಸಂಬಂಧ ಪಟ್ಟ ಎಂ ಎಲ್. ಎ. ಯನ್ನು ಕರೆದುಕೊಂಡು ಹೋಗುವುದು ಒಳ್ಳೆಯದು ಎಂಬ ದೃಷ್ಟಿಯಿಂದ ನಾನು ಈ ಮಾತನ್ನು ಹೇಳಿದ್ದು.

Incident at Tiptur when the Revenue Minister was on Tour.

ಶ್ರೀ ಟಿ. ಎಂ. ಮಂಜುನಾಥ.—ಮಾನ್ಯ ಅಧ್ಯಕ್ಷರೇ, ಹಿರಿಯರಾದಂಥ ಸನ್ಮಾನ್ಯ ಕಂದಾಯ ಮಂತ್ರಿಗಳು ಪ್ರಥಮವಾಗಿ ನಮ್ಮ ತಾಲ್ಲೂಕ್‌ನಲ್ಲಿ ಪ್ರವಾಸ ಮಾಡಿದಾಗ ನಡೆದಂಥ ಘಟನೆಯನ್ನು ಹೇಳಲು ಇಚ್ಛೆಪಡುತ್ತೇನೆ. ವೈಯಕ್ತಿಕವಾಗಿ ಶ್ರೀಮಾನ್ ಹುಚ್ಚಮಾಸ್ತಿಗೌಡರಿಗೂ ನನಗೂ ಯಾವ ತರಹದ ಭಿನ್ನಾಭಿಪ್ರಾಯ ಇಲ್ಲ. ನನಗೆ ಅವರಲ್ಲಿ ಅಭಿಮಾನವಿದೆ. ಮತ್ತು ಅವರು ಹಿರಿಯರು ಎಂಬ ಭಾವನೆ ಇದೆ. ಮಂತ್ರಿಗಳು ನಮಗೆ ಮಾತ್ರ ಮಂತ್ರಿಗಳಲ್ಲದೆ ಇಡೀ ದೇಶಕ್ಕೆ ಮಂತ್ರಿಗಳು ಎಂಬ ಭಾವನೆಯಿಂದ ನಾನು ಚುನಾವಣೆಯಲ್ಲಿ ಆರಿಸಿ ಬಂದಮೇಲೆ ನನ್ನ ಕ್ಷೇತ್ರಕ್ಕೆ ೪-೫ ಜನ ಮಂತ್ರಿಗಳನ್ನು ಆಹ್ವಾನ ಮಾಡಿದ್ದೇನೆ. ಅವರು ತಿಪಟೂರಿಗೆ ಬಂದಾಗ ಭವ್ಯ ಸ್ವಾಗತವನ್ನು ಕೊಟ್ಟಿದ್ದೇವೆ. ತಾ॥ ೨೩ನೇ ಜುಲೈ ೧೯೭೨ರಲ್ಲಿ ಮಾನ್ಯ ಹಿರಿಯರಾದಂಥ ಶ್ರೀಮಾನ್ ಹುಚ್ಚಮಾಸ್ತಿಗೌಡರು ನಮ್ಮ ತಾಲ್ಲೂಕಿನ ಒಂದು ಹಳ್ಳಿಗೆ ವಿದ್ಯುಚ್ಛಕ್ತಿ ಪ್ರಾರಂಭೋತ್ಸವ ಮಾಡಲು ರಾತ್ರಿ ಹತ್ತೂವರೆ ಗಂಟೆಗೆ ಬಂದರು. ಆ ಸಮಾರಂಭ ಮುಗಿದ ಮೇಲೆ ತಿಪಟೂರಿಗೆ ರಾತ್ರಿ ೧೧ ಗಂಟೆಗೆ ಬಂದು ತಮಗೆ ಬೇಕಾದ ಅಧಿಕಾರಿಗಳನ್ನು ಕರೆಸಿ, ಅವರಿಂದ ತಾಲ್ಲೂಕ್ ಅಭಿವೃದ್ಧಿ ಮಂಡಲಿಯ ಚುನಾವಣೆಗೆ ಸಂಬಂಧಪಟ್ಟ ರೆಕಾರ್ಡ್‌ಗಳನ್ನು ತಾಲ್ಲೂಕ್ ಅಭಿವೃದ್ಧಿ ಮಂಡಲಿಯಿಂದ ತರಿಸಿ, ಆ ರೀತಿ ಮಾಡಬೇಕು, ಈ ರೀತಿ ಮಾಡಬೇಕು ಎಂದು ಅಧಿಕಾರಿಗಳಿಗೆ ಹೇಳಿದ್ದಾರೆಂದು ನನಗೆ ತಿಳಿದುಬಂತು. ಇದು ನಿಜವಾದ ಸಂಗತಿ. ಹಿಂದೆ ಮಾನ್ಯ ಶಿವಪ್ಪನವರು ವಿರೋಧಪಕ್ಷದ ನಾಯಕರಾಗಿದ್ದಾಗಲೂ ಸಹ ಆಗಿನ ಮಂತ್ರಿಗಳನ್ನು ತಮ್ಮ ಕ್ಷೇತ್ರಕ್ಕೆ ಬರಮಾಡಿಕೊಂಡು ಮತ್ತು, ಮಂತ್ರಿಗಳು ಕಾರ್ಯಕ್ರಮ ಇಟ್ಟುಕೊಂಡು ಬಂದಾಗಲೆಲ್ಲಾ ಸುಸ್ವಾಗತ ನೀಡಿ ಕಳುಹಿಸಿಕೊಡುತ್ತಿದ್ದರು. ಹಿರಿಯರಾದಂಥ ಶ್ರೀಮಾನ್ ಹುಚ್ಚಮಾಸ್ತಿಗೌಡರು ಈಗಿನ ಮಂತ್ರಿಮಂಡಲ ಅಧಿಕಾರ ವಹಿಸಿಕೊಂಡ ಮೇಲೆ ಕಂದಾಯ ಶಾಖೆಯ ಮಂತ್ರಿಗಳಾದರು. ಇದಕ್ಕೂ ಮೊದಲು ಅವರು ವಿಧಾನಸಭಾ ಸದಸ್ಯರಾಗಿದ್ದುಕೊಂಡು ದೊಡ್ಡ ದೊಡ್ಡ ಹುದ್ದೆಗಳಲ್ಲಿ ಕೆಲಸ ಮಾಡಿ ಹೆಚ್ಚಿನ ಅನುಭವ ಪಡೆದುಕೊಂಡು ಯಾವ ಯಾವ ಸ್ಥಾನಮಾನಗಳಲ್ಲಿ ಇದ್ದುಕೊಂಡು ವಿಷ್ಟರಮಟ್ಟಿಗೆ ಬೆಲೆ ಕೊಡಬೇಕು ಎಂಬುದನ್ನೆಲ್ಲಾ ಅವರು ತಿಳಿದುಕೊಂಡಿದ್ದಾರೆ. ಈ ರೀತಿ ಅನುಭವ ಪಡೆದೂ ಸಹ ಚುನಾವಣೆಯ ವಿಷಯದಲ್ಲಿ ಹಸ್ತಕ್ಷೇಪ ಮಾಡಬಹುದೇ ಎಂದು ಕೇಳುತ್ತೇನೆ. ಒಂದು ಮಾತನ್ನು ಈ ಸಮಯದಲ್ಲಿ ಸ್ಪಷ್ಟೀಕರಣಮಾಡುತ್ತೇನೆ, ಏನೆಂದರೆ, ಯಾವುದೇ ಒಂದು ಚುನಾವಣೆಯಲ್ಲಿ ಸರ್ಕಾರ ನಡೆಸತಕ್ಕಂಥ ಮಂತ್ರಿಗಳು ಹಸ್ತಕ್ಷೇಪ ಮಾಡಿದಾಗ, ಆ ಚುನಾವಣೆ ನ್ಯಾಯವಾಗಿ ನಡೆಯುವುದಕ್ಕಾಗುತ್ತದೆಯೇ ಎಂಬುದನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಮಂತ್ರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಚುನಾವಣೆ ವಿಷಯದಲ್ಲಿ ಆ ರೀತಿ ಮಾಡಬೇಕು ಈ ರೀತಿ ಮಾಡಬೇಕು ಎಂದು ತಿಳಿಸಿ ಬಂದ ಮೇಲೆ, ಅವರ ಪಕ್ಷದ ಸದಸ್ಯರುಗಳು ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಮತ್ತು ಜಿಲ್ಲಾಧಿಕಾರಿಗಳ ಹತ್ತಿರ ಹೋಗಿ ಮಂತ್ರಿಗಳು ಹೇಳಿರುವುದರಿಂದ ತಾವು ತಾಲ್ಲೂಕ್ ಅಭಿವೃದ್ಧಿ ಮಂಡಲಿಯಲ್ಲಿ ಚುನಾವಣೆ ವಿಷಯದಲ್ಲಿ ಏನು ತೀರ್ಮಾನ ತೆಗೆದುಕೊಳ್ಳಲಾಗಿದೆಯೋ ಅದನ್ನು ಮತ್ತೊಮ್ಮೆ ಪರಿಶೀಲನೆ ಮಾಡಬೇಕು ಎಂದು ಒತ್ತಾಯ ಮಾಡಿದ್ದಾರೆಂದು ತಿಳಿದುಬಂದಿದೆ. ಈ ಒಂದು ಪರಿಸ್ಥಿತಿ ನಮ್ಮ ತಾಲ್ಲೂಕ್‌ನಲ್ಲಿ ಒದಗಿದೆ. ಈ ಸರ್ಕಾರವನ್ನು ನಡೆಸತಕ್ಕ ಮಂತ್ರಿಗಳು ಕಾನೂನು ಪ್ರಕಾರ ಕೆಲಸ ಮಾಡತ್ಕಕ್ಕಂಥ ಅಧಿಕಾರಿಗಳ ಮೇಲೆ ಲಗಾಮು ಹಾಕಿದರೆ ಅದರಿಂದ ನಮ್ಮ ಕ್ಷೇತ್ರಕ್ಕೆ ಎಷ್ಟು ದಕ್ಕೆಯಾಗುತ್ತದೆ ಎಂಬುದನ್ನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಹೇಳುತ್ತಿದ್ದೇನೆ.

ಮಾನ್ಯ ರೆವಿನ್ಯೂ ಮಂತ್ರಿಗಳಾದ ಶ್ರೀಮಾನ್ ಹುಚ್ಚಮಾಸ್ತಿಗೌಡರು ನಮ್ಮ ತಾಲ್ಲೂಕಿಗೆ ಪ್ರವಾಸ ಬಂದ್ದಾಗ ನಾನು ಆ ಸ್ಥಳದ ಎಂ.ಎಲ್.ಎ. ಆಗಿ ಅವರನ್ನು ಸ್ವಾಗತಿಸಲು ಹೋಗಿದ್ದೆ. ಮಾನ್ಯ ಮಂತ್ರಿಗಳ ಜೊತೆಯಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಇನ್ನೂ ಹಲವಾರು ಜನ ಇದ್ದರು. ಆಗ ಶ್ರೀಮಾನ್ ಹುಚ್ಚಮಾಸ್ತಿಗೌಡರು ನನ್ನನ್ನು ನೋಡಿದರು. ನಾನು ಆ ಸ್ಥಳದ ವಿಧಾನ ಸಭೆಯ ಸದಸ್ಯ ಎಂಬುದು ಅವರಿಗೆ ಗೊತ್ತು. ಹೀಗಿದ್ದರೂ ಅವರು ನನಗೆ ಸನ್ಮಾನ ಕೊಡದೆ ಮರ್ಯಾದೆ ಕೊಡದೆ ಅವರ ಎದುರಿಗೆ ನಿಂತಿದ್ದ ಯಾರೋ ಒಬ್ಬರೂ ಆಡಳಿತ ಕಾಂಗ್ರೆಸ್ಸಿನವರನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಮುಂದಕ್ಕೆ ಹೋದರು. ಅಷ್ಟು ಜನಗಳ ಎದುರಿನಲ್ಲಿ ಆ ಕ್ಷೇತ್ರದ ವಿಧಾನ ಸಭೆಯ ಸದಸ್ಯನಾದ ನನ್ನನ್ನು ಅವರು ಸರಿಯಾಗಿ ಮಾತನಾಡಿಸದೆ ಗೌರವ ಕೊಡದೆ ತಮ್ಮ ಜೊತೆಯಲ್ಲಿ ಬೇರೆ ಯಾರೋ ಒಬ್ಬರು ಆಡಳಿತ ಕಾಂಗ್ರೆಸ್ಸಿನವರನ್ನು ಕರೆದುಕೊಂಡು ಹೋದರೆ ಆ ಸ್ಥಳದ ಎಂ ಎಲ್ ಎ ಯ ಕಿಮ್ಮತ್ತು ಏನಾಗುತ್ತದೆ ಎಂಬುದನ್ನು ಯೋಚನೆ ಮಾಡಿ ? ಅಷ್ಟೊಂದು ಜನಗಳ ಎದುರಿನಲ್ಲಿ ಆ ಸ್ಥಳದ ಎಂ.ಎಲ್.ಎ. ಆದ ನನಗೆ ಅವರು ಒಂದು ಚೂರು ಬೆಲೆಯನ್ನು ಕೊಡದೆ ಹೋದರೆ ಆ ತಾಲ್ಲೂಕಿನ ಜನಗಳಿಗೆ ನನ್ನ ಬೆಲೆ ಎಷ್ಟರ ಮಟ್ಟಿಗೆ ಇರುತ್ತದೆ ಎಂಬುದನ್ನು ತಾವೇ ಯೋಚನೆ ಮಾಡಿರಿ. ಇದನ್ನು ನ್ಯಾಯರೀತಿಯಿಂದ ವಿವ ಶ್ರೆ

(ಶ್ರೀ ಟಿ. ಎಂ. ಮಂಜುನಾಥ)

ಮಾಡಿ ನೋಡಿ. ಇಂಥಾ ಒಂದು ಕೆಲಸವನ್ನು ಹಿರಿಯರಾದ ಶ್ರೀಮಾನ್ ಹುಚ್ಚಮಾಸ್ತಿಗೌಡರು ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿರಲ್ಲಿಲ್ಲ. ನಾನು ಅವರನ್ನು ಆಗಸ್ಟ್ ೧೫ನೆ ತಾರೀಖಿನ ದಿವಸ ಅಭಿಮಾನದಿಂದ ನಮ್ಮ ತಿಪಟೂರು ಕ್ಷೇತ್ರಕ್ಕೆ ಕರೆದುಕೊಂಡು ಹೋಗಿ ಅವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಮಾಡಬೇಕೆಂಬ ನಿರ್ಧಾರ ಮಾಡಿದ್ದೆ. ಅದರಲ್ಲಿ ನಮಗೇನೂ ರಾಜಕೀಯವಿಲ್ಲ. ನಮ್ಮ ಕ್ಷೇತ್ರಕ್ಕೆ ಯಾವ ಮಂತ್ರಿಗಳೇ ಬರಲಿ ಆಗ ನಾವು ಅವರಿಗೆ ಭವ್ಯಸ್ವಾಗತವನ್ನು ಕೊಟ್ಟಿದ್ದೇವೆ. ಆದ್ದರಿಂದ ಮಾನ್ಯ ಮಂತ್ರಿಗಳು ಅಲ್ಲಿಗೆ ಬಂದಿದ್ದಾಗ ಆ ಸ್ಥಳದ ಎಂ ಎಲ್ ಎ ಗೆ ಮರ್ಯಾದೆಯನ್ನು ಕೊಡುವುದು ಅವರ ಆದ್ಯ ಕರ್ತವ್ಯ. ಹೀಗಿರುವಾಗ ಶ್ರೀಮಾನ್ ಹುಚ್ಚಮಾಸ್ತಿಗೌಡರು ನಮ್ಮ ಕ್ಷೇತ್ರಕ್ಕೆ ಪ್ರವಾಸ ಬಂದಿದ್ದಾಗ ನನಗೆ ಮರ್ಯಾದೆಯನ್ನು ಕೊಡದೆ ಜೊತೆಗೆ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಚುನಾವಣೆಯ ವಿಚಾರದಲ್ಲಿ ಹಸ್ತಕ್ಷೇಪ ಮಾಡಿದ್ದಾರೆ. ಇದು ಸರಿಯೆ ? ಇದು ದೌರ್ಜಡಿಕತನವನ್ನು ತೋರಿಸುವುದಿಲ್ಲವೇ, ತಾವು ಸತ್ಯ ರೀತಿಯಿಂದ ತಾಲ್ಲೂಕು ಅಭಿವೃದ್ಧಿ ಮಂಡಲಿಯ ಚುನಾವಣೆಯನ್ನು ಮಾಡಿ ನಾವು ಅದಕ್ಕೆ ಬೇಡ ಎಂದು ಹೇಳುವುದಿಲ್ಲ. ಆದರೆ ಮಂತ್ರಿಗಳು ಪ್ರವಾಸ ಬಂದಂತಹ ಕಾಲದಲ್ಲಿ ಆ ಸ್ಥಳದ ಎಂ.ಎಲ್ ಎ.ಗೆ ಸರಿಯಾದ ಮರ್ಯಾದೆಯನ್ನು ಕೊಡದಿದ್ದರೆ ಹೇಗೆ ಎಂಬುದನ್ನು ತಾವೇ ಯೋಚನೆ ಮಾಡಬೇಕು. ಅದಕ್ಕೋಸ್ಕರ ಇನ್ನು ಮುಂದಾದರೂ ಮಂತ್ರಿಗಳು ನಮ್ಮ ತಿಪಟೂರು ಕ್ಷೇತ್ರಕ್ಕೆ ಪ್ರವಾಸ ಬಂದಾಗ ನಮ್ಮ ವಿಚಾರದಲ್ಲಿ ಒಂದು ಕೆಟ್ಟ ಅಭಿಪ್ರಾಯ ಬಾರದ ಹಾಗೆ ನಮಗೆ ಸರಿಯಾದ ಮರ್ಯಾದೆಯನ್ನು ಕೊಡಬೇಕು, ಇನ್ನು ಮುಂದೆ ಇಂಥಾ ಪ್ರಸಂಗ ಬಾರದ ಹಾಗೆ ನಡೆದು ಕೊಳ್ಳಬೇಕೆಂದು ನಾನು ಹೇಳುತ್ತೇನೆ. ಶ್ರೀಮಾನ್ ಹುಚ್ಚಮಾಸ್ತಿಗೌಡರ ಮೇಲೆ ನಾನು ದೋಷಾರೋಪಣೆ ಮಾಡುತ್ತಿಲ್ಲ. ಅವರು ವಯಸ್ಸಿನಲ್ಲಿ ನನಗಿಂತ ದೊಡ್ಡವರು ಹಾಗೂ ಅನುಭವಿಗಳು. ಅವರಂಥ ಯಾರೋ ತಮ್ಮ ಪಕ್ಷದವರ ಮಾತನ್ನು ಕೇಳಿ ಅವರು ಈ ರೀತಿ ಮಾಡಿದ್ದಾರೆ. ಅವರು ನನ್ನ ವಿಚಾರದಲ್ಲಿ ತಪ್ಪು ಅಭಿಪ್ರಾಯವನ್ನು ತಿಳಿದುಕೊಳ್ಳಬಾರದು. ನಾನು ನಡೆದಂತಹ ಸತ್ಯ ಸಂಗತಿಯನ್ನು ಹೇಳಿದ್ದೇನೆ. ನಾನು ಸತ್ಯಕ್ಕೆ ದೂರವಾದ ವಿಷಯವನ್ನು ಹೇಳಿಲ್ಲ. ಅವರು ಬುದ್ಧಿವಂತರು ಅನುಭವಿಗಳು ಆಗಿ ಈ ರೀತಿ ನಡೆದುಕೊಳ್ಳಬಾರದು ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ :—ಮಾನ್ಯ ಅಧ್ಯಕ್ಷರೇ ಈಗತಾನೆ ತಿಪಟೂರು ಕ್ಷೇತ್ರದ ಮಾನ್ಯ ಸದಸ್ಯರು ಅಲ್ಲಿ ನಡೆಯದೇ ಇರತಕ್ಕ ಕೆಲವ ವಿಚಾರಗಳನ್ನು ಹೇಳಿದರು. ಅವರು ಈ ತರಹ ಹೇಳುವುದರಿಂದ ಪರಿಸ್ಥಿತಿ ಉತ್ತಮವಾಗುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಆ ಕ್ಷೇತ್ರಕ್ಕೆ ಯಾವುದೋ ಒಂದು ಊರಿಗೆ ವಿದ್ಯುಚ್ಛಕ್ತಿ ಪ್ರವೇಶೋತ್ಸವಕ್ಕೆ ಹೋಗಿದ್ದೆ. ಅಲ್ಲಿ ಸಮಾರಂಭ ಮುಗಿಯುವುದು ಸ್ವಲ್ಪ ತಡವಾಯಿತು. ಮಾನ್ಯ ಸದಸ್ಯರು ಅಲ್ಲಿ ಇರಲ್ಲಿಲ್ಲ. ನಾನು ವಿದ್ಯುಚ್ಛಕ್ತಿ ಪ್ರವೇಶೋತ್ಸವವನ್ನು ಮುಗಿಸಿಕೊಂಡು ವಾಪಸ್ಸು ತಿಪಟೂರಿಗೆ ಬರುವಾಗ ಬಹಳ ಹೊತ್ತು ಆಗಿತ್ತು. ನಾನು ಅಲ್ಲಿಗೆ ಬಂದಾಗ ಬಹಳ ಹೊತ್ತು ಆಗಿತ್ತು. ನಾನು ಅಲ್ಲಿಗೆ ಬಂದಾಗ ಅಲ್ಲಿ ಕೆಲವು ಹಿರಿಯ ಅಧಿಕಾರಿಗಳು ಮತ್ತು ಕೆಲವು ಸ್ನೇಹಿತರು ಇದ್ದರು. ಆಡರೆ ಮಾನ್ಯ ಸದಸ್ಯರು ಕೆಲವು ಅಧಿಕಾರಿಗಳನ್ನು ಕರೆಸಿಕೊಂಡು ತಾಲ್ಲೂಕು ಅಭಿವೃದ್ಧಿ ಮಂಡಲಿಯ ಚುನಾವಣೆಯ ವಿಷಯವನ್ನು ಮಾತನಾಡಿದರು ಎಂದು ಹೇಳಿದ್ದು ಸತ್ಯಕ್ಕೆ ದೂರವಾದ ಮಾತು, ಹೀಗೆ ನಡೆಯದೇ ಇರತಕ್ಕ ವಿಚಾರಗಳನ್ನು ಮಾನ್ಯ ಸದಸ್ಯರು ಹೇಳಬಾರದು. ಅದರ ಜೊತೆಗೆ ಅಲ್ಲಿಗೆ ಇನ್ನೊಂದು ಸಾರಿ ಅಲ್ಲಿಗೆ ಪ್ರವಾಸ ಹೋದಾಗ ಯಾವುದೋ ಒಂದು ದೇವಸ್ಥಾನಕ್ಕೆ ಹೋಗಬೇಕಾದ ಸಂದರ್ಭಬಂತು. ಆದು ಮೊದಲು ಪ್ರೋಗ್ರಾಮಿನಲ್ಲಿ ಇರಲಿಲ್ಲ. ಆ ದೇವಸಾನ ನೋಡಬೇಕಾದದ್ದು ಮತ್ತು ಬಹಳ ದೊಡ್ಡ ದೇವಸ್ಥಾನ, ಅಲ್ಲಿಗೆ ಹೋಗಬೇಕು ಎಂದು ಹಿಂದೆ ಆ ಕ್ಷೇತ್ರದಲ್ಲಿ ಎಂ.ಎಲ್.ಎ. ಆಗಿದ್ದ ನಮ್ಮ ಪಕ್ಷದ ಸದಸ್ಯರು ತಿಳಿಸಿದರು. ಆದ್ದರಿಂದ ನಾನು ಅಲ್ಲಿಗೆ ಹೋಗಬೇಕಾಯಿತು. ನಾನು ಮಾನ್ಯ ಸದಸ್ಯರನ್ನು ಜೊತೆಯಲ್ಲಿ ಕರೆದುಕೊಂಡು ಹೋಗುವುದಕ್ಕೆ ಅವರನ್ನು ನಾನು ಬೇಡ ಎಂದು ಹೇಳಲಿಲ್ಲ. ಅವರು ಆ ಸ್ಥಳದಲ್ಲಿದ್ದವರು ತಮ್ಮಪ್ಪನಕ್ಕೆ ತಾವು ಎದ್ದು ಹೊರಟು ಹೋದರೆ ಅದಕ್ಕೆ ನಾನು ಜವಾಬ್ದಾರನಲ್ಲ. ಅಲ್ಲಿ ನಮ್ಮ ಪಕ್ಷದ ಸದಸ್ಯರಿಗೆ ಗೌರವವನ್ನು ಕೊಟ್ಟರು ಎಂದು ಹೇಳಿದರು. ಆದಕ್ಕೆ ನಾನು ಹಿಂಜರಿಯುವುದಿಲ್ಲ. ನಮ್ಮ ಪಕ್ಷದ ನಾಲ್ಕಾಣೆ ಸದಸ್ಯರಾದರೂ ಕೂಡ ಅವರನ್ನು ಬೆನ್ನುತಟ್ಟಿ ಬೆಳಸಬೇಕು. ಸರ್ಕಾರಿ ದುಡ್ಡಿನಲ್ಲಿ ಪ್ರವಾಸ ಹೋದರೂ ಕೂಡ ನಾವು ನಮ್ಮ ಪಕ್ಷದ ಸದಸ್ಯರಿಗೆ ಬರಬೇಡಿ ಎಂದು ಹೇಳುವುದಕ್ಕಾಗುವುದಿಲ್ಲ. ಅವರು ಬಂದೇ ಬರುತ್ತಾರೆ ಅವರಿಗೂ ನಾವು ಗೌರವ ಕೊಡುತ್ತೇವೆ. ಆ ಕ್ಷೇತ್ರದ ಶಾಸನಸಭಾ ಸದಸ್ಯರಿಗೆ ಎಷ್ಟರ ಮಟ್ಟಿನ ಗೌರವವನ್ನು ಕೊಡಬೇಕೋ ಅಷ್ಟರಮಟ್ಟಿನ ಗೌರವ ಕೊಡುತ್ತೇವೆ. ಅವರಿಗೆ ನಮ್ಮ ಪ್ರವಾಸದ ಕಾರ್ಯಕ್ರಮ ಪಟ್ಟಿಯನ್ನು ತಿಳುಹಿಸುತ್ತೇವೆ. ನಾವು ಪ್ರವಾಸ ಹೋದಂತಹ ಕಾಲದವಲ್ಲಿ ಯಾರೇ ಅಲ್ಲಿಗೆ ಒಂದರೂ ಕೂಡ ನಾವು ಅವರನ್ನು ಅಲ್ಲಿಗೆ ಬರಬೇಡಿ ಎಂದು ಹೇಳುವುದಕ್ಕಾಗುವುದಿಲ್ಲ. ನಮಾ

ಪಕ್ಷದ ಸದಸ್ಯರು ಹಿಂದೆ ಆ ಕ್ಷೇತ್ರದಲ್ಲಿ ಎಂ ಎಲ್.ಎ. ಆಗಿದ್ದವರು ನಮ್ಮ ಜೊತೆಯಲ್ಲಿ ಬಂದು ಕುಳಿತು ಕೊಂಡರೆ ಅದನ್ನು ಈ ಮಾನ್ಯ ಸಭೆಯ ಸದಸ್ಯರು ಸಹಿಸದಿದ್ದರೆ ನಾವೇನು ಮಾಡುವುದಕ್ಕಾಗುತ್ತದೆ ? ಅಷ್ಟೇ ಅಲ್ಲ ಅವರು ಇಲ್ಲದೇ ಇರತಕ್ಕ ವಿಷಯಗಳನ್ನು ಈ ಸಭೆಯಲ್ಲಿ ಹೇಳಿದ್ದಾರೆ. ಇದರ ಜೊತೆಗೆ ಮಾನ್ಯ ಸದಸ್ಯರಿಗೆ ಆಸಕ್ತಿ ಇರತಕ್ಕಂಥಾ ಇನ್ನೊಂದು ದೇವಸ್ಥಾನದಲ್ಲಿ ನಡೆದಂತಹ ಅಕ್ರಮಗಳ ಬಗ್ಗೆ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ. ಅದನ್ನು ಸ್ವಲ್ಪ ಮನಸ್ಸಿನಲ್ಲಿಟ್ಟುಕೊಂಡು ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಹೇಳಿದರು. ಅದು ಸರಿಯಲ್ಲ,

ಶ್ರೀ ಟಿ. ಎಂ. ಮಂಜುನಾಥ್ .—ಮಾನ್ಯ ಮಂತ್ರಿಗಳು ನಾನು ಸತ್ಯಕ್ಕೆ ದೂರವಾದ ಆಪಾದನೆಗಳನ್ನು ಮಾಡಿದ್ದೇನೆ ಎಂದು ಹೇಳಿದರು. ಇವತ್ತಿನ ದಿವಸ ನಾನು ಒಂದು ವಿಷಯವನ್ನು ಹೇಳುತ್ತೇನೆ, ಮಾನ್ಯ ಮಂತ್ರಿಗಳು ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿ ಅವರು ಅಧಿಕಾರವನ್ನು ಸ್ವೀಕಾರ ಮಾಡಿದ್ದಾರೆ. ನಾನು ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳಿದ್ದರೆ ನಾನು ರಾಜಿನಾಮೆಯನ್ನು ಕೊಡುತ್ತೇನೆ. ಇಲ್ಲದಿಹೋದರೆ ಅವರು ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳಿದ್ದರೆ ಅವರು ತಮ್ಮ ಪದವಿಗೆ ರಾಜಿನಾಮೆಯನ್ನು ಕೊಡಲಿ. ಬೇಕಾದರೆ ವಿಚಾರಣೆ ಮಾಡಲಿ ನಾನು ಹೇಳುತ್ತೇನೆ ಸತ್ಯಕ್ಕೆ ದೂರವಾದ ಮಾತನ್ನು ನಾನು ಎಂದಿಗೂ ಆಡುವುದಿಲ್ಲ. ಹಿರಿಯರೂ ಅನುಭವಿಗಳೂ ಆದ ಶ್ರೀಮಾನ್ ಹುಚ್ಚಮಾಸ್ತಿಗೌಡರು ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳಿದ್ದಾರೆ. ಇಂಥಾ ಸಂದರ್ಭದಲ್ಲಿ ವಿಚಾರಣೆ ಮಾಡಿ ಯಾರು ಸತ್ಯಕ್ಕೆ ದೂರವಾದ ವಿಚಾರಗಳನ್ನು ಹೇಳಿದ್ದಾರೆ ಮತ್ತು ತಪ್ಪು ಮಾಡಿದ್ದಾರೆ ಅವರ ಮೇಲೆ ಸೂಕ್ತ ಕ್ರಮತೆಗೆದುಕೊಳ್ಳಬೇಕು. ಒಂದು ಜವಾಬ್ದಾರಿಯ ಸ್ಥಾನದಲ್ಲಿರತಕ್ಕವರು ಈ ರೀತಿ ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳುತ್ತಾ ಏನೂ ತಿಳಿಯದವರ ಹಾಗೆ ನಟನೆ ಮಾಡುವುದು ಶೋಚನೀಯವಾದ ವಿಷಯ.

ಶ್ರೀ ಜಿ. ವೆಂಕಟಪ್ಪ :—ಸ್ವಾಮಿ ಪಾಯಿಂಟ್ ಆಫ್ ಆರ್ಡರ್. ಮಾನ್ಯ ಸದಸ್ಯರು ಯಾವುದೋ ಒಂದು ವಿಚಾರವನ್ನು ಅಧ್ಯಕ್ಷರ ಮುಖಾಂತರ ಯಾವುದೋ ಒಂದು ವಿಚಾರವನ್ನು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತಂದು ಅವರು ಅದಕ್ಕೆ ತಮ್ಮ ಎಕ್ಸ್‌ಪ್ಲನೇಷನ್ ಕೊಟ್ಟನಂತರವೂ ಯಾವುದೋ ವಿಚಾರಗಳನ್ನು ಮಾತನಾಡುತ್ತಾ ಈ ಸಭೆಯ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಅಡ್ಡಿಯನ್ನುಂಟು ಮಾಡುತ್ತಿರುವುದು ಸರಿಯೇ ?

MR DEPUTY SPEAKER :—The Hon'ble Member has raised a point of order that something was raised by way of protest by one Hon'ble Member and the Hon'ble Minister for Revenue has given his own version according to himself. Hon'ble Members have got a right to have their own versions. The Hon'ble Member is now saying that he is strongly protesting. It is his right. I hold that each Hon'ble Member has his own way of looking at things and hold his own opinion.

So far as the point of order is concerned, it would not be good to protest in very harsh offensive and insulting manner. To that extent the protest has not encroached or transgressed the limits. Therefore, though there is force in the point of order raised by the Hon'ble Member Sri Venkatappa, I feel that the limit has not been transgressed.

Proposed Distribution of sities on 15th August 1972.

SRI T. R. SHAMANNA (FORT).—Sir, four co-legislators and I have given notice regarding the question of allotment of sites proposed to be made by the 15th August by the Hon'ble Minister for Municipal Administration. It is a matter of serious consequence since lakhs of sites are stated to be distributed. Legislators should be consulted in

(Sri T. R. Shamanna)

this respect. It is regreted that it is being done without taking into consideration the opinion of the legislators. The legislators are expected to be consulted since it is a question of distribution of lakhs of sites. I urge the Government to take the legislators into confidence.

MR. DEPUTY SPEAKER.—I will see that the notice is examined as early as possible and the best possible thing is done.

SRI T. R. SHAMANNA —On the 15th, the Minister is going to announce the policy. It is for that reason there is urgency to consult the concerned legislators. The question of distribution may be considered and decided in consultation with the legislators of the respective Constituency. We must have a say in the matter so that there may be equitable distribution.

MR. DEPUTY SPEAKER.—How does the hon. member expect things?

SRI T. R. SHAMANNA —We the elected members have a responsibility to see that proper justice is done in the distribution of sites. This question is not only concerned with Bangalore City but also is concerned with the whole State.

MR DEPUTY SPEAKER.—Today is allotted for non-official business. Hon. members should be very vigilant to see that the time is fully utilised for this work Even if Sri Shamanna has got some thing important to say he should be very brief. He should not make a speech. I personally feel that the hon. member's request must be given top priority: that will be certainly done.

SRI T. R. SHAMANNA.—Our views must be communicated to the Government.

MR. DEPUTY SPEAKER —Hon'ble Minister are here and they are attentive.

Licence to deal in Kerosene.

ಶ್ರೀ ವಾಟಾಳ್ ನಾಗರಾಜ್.— ಅಧ್ಯಕ್ಷರೆ ನಾನು ಒಂದು ನಿಲುವಳಿ ಸೂಚನೆಯನ್ನು ಕಳಿಸಿದ್ದೇನೆ. ಅದೇ ರೀತಿ ಒಂದು ಎರಡೂವರೆ ಗಂಟೆಯ ಚರ್ಚೆಗೆ ಒಂದು ನೋಟೀಸ್ ಕಳಿಸಿದ್ದೇನೆ ಅದು ಕೆ. ಕೆ. ಮೂರ್ತಿಯವರು ಲೈಸೆನ್ಸ್ ಇಲ್ಲದೆ ಸೀಮೆಎಣ್ಣೆ ಮಾರಿರತಕ್ಕಂತಹ ವಿಚಾರ. ಆದರ ಮೇಲೆ ಸರ್ಕಾರದವರು ಇದುವರೆಗೂ ಏನೂ ಕಾರ್ಯಕ್ರಮ ತೆಗೆದುಕೊಂಡಿಲ್ಲ ಅದರ ಬದಲು ಆ ವ್ಯಕ್ತಿಯ ಮೇಲೆ ವಿಪರೀತ ಚಾರ್ಜಸ್ ಇದ್ದರೂ ಗುರುತರವಾದ ಆಪಾದನೆಗಳು ಇದ್ದರೂ ಮತ್ತು ಸರ್ಕಾರಕ್ಕೆ ಮೋಸ ಮಾಡಿದ್ದರೂ ಫಿಲ್ಮ್ ಬೋರ್ಡಿಗೆ ಡೈರೆಕ್ಟರನ್ನಾಗಿ ಮಾಡಿದ್ದಾರೆ. ಹಾಗೆ ಇನ್ನೂ ಇತರ ಸಂಸ್ಥೆಗಳಿಗೆ ಡೈರೆಕ್ಟರನ್ನಾಗಿ ಮಾಡಿದ್ದಾರೆ. ಇವನು ಹಿಂದೆ ವಿಶ್ವ ಕಾಫಿ ಪೂಡಿ ಮಾಡಿದರು ಎಂದು ಒಂದು ಕೇಸಿನಲ್ಲಿ ಒಳಗಾಗಿದ್ದರು. ಮತ್ತೆ ಸರ್ಕಾರದವರು ಅವನ್ನು ವಿತ್‌ಡ್ರಾ ಮಾಡಿದ್ದಾರೆ.

MR. DEPUTY SPEAKER.—I will see that it is examined.

ಶ್ರೀ ವಾಟಾಳ್ ನಾಗರಾಜ್.—ಅಲ್ಲ, ಇಷ್ಟೊಂದು ಅಪಾದನೆ ಅವರ ಮೇಲೆ ಇದ್ದರೂ ಇಲ್ಲಿ ವಿರೋಧ ಪಕ್ಷದ ಸದಸ್ಯರು ಇಷ್ಟು ಪ್ರತಿಭಟನೆ ಮಾಡಿದರೂ ಏಕೆ ಅವರಿಗೆ ಇನ್ನೂ ಆಶ್ರಯ ಕೊಡುತ್ತಿದ್ದಾರೆ? ಸರ್ಕಾರದವರು ಇದರ ಬಗ್ಗೆ ಒಂದು ಸ್ಪಷ್ಟವಾದ ಹೇಳಿಕೆ ಕೊಡಬೇಕು. ಇವರು ಇವತ್ತು ಒಬ್ಬರು ಸರ್ಕಾರದ ಪರವಾಗಿರುವ 'ಕಿಂಗ್' ಆಗಿದ್ದಾರೆ. ಆದ್ದರಿಂದ ಇದರ ಬಗ್ಗೆ ಚರ್ಚೆಗೆ ಒಂದು ಅವಕಾಶವನ್ನು ಮಾಡಿಕೊಡಬೇಕು. ಇವತ್ತು ಮುಖ್ಯಮಂತ್ರಿಯವರು ಆ ವ್ಯಕ್ತಿಯನ್ನು ಶಿಲ್ಡ್ ಮಾಡುತ್ತಿದ್ದಾರೆ.

MR. DEPUTY SPEAKER.— Even though our speeches here are privileged in the sense that they cannot be proceeded legally outsid, there should be some restraint. We will examine the member's notice.

ಶ್ರೀ ವಾಟಾಳ್ ನಾಗರಾಜ್.—ನಾನು ಕಳಿಸಿದಂತಹ ಎರಡೂವರೆ ಗಂಟೆಯ ಚರ್ಚೆಯನ್ನು ಕೈಬಿಟ್ಟರು; ಸಲುವಳಿ ಸೂಚನೆಯನ್ನು ಸಹ ಕೈಬಿಟ್ಟರು. ಇವರು ಸರ್ಕಾರದ ಜೇಬಿನಲ್ಲಿ ಕಾಪಿ ಪುಡಿಯನ್ನು ಮಾರುತ್ತಿದ್ದರು ಅದೇ ರೀತಿ ಲೈಸೆನ್ಸ್ ಇಲ್ಲದೆ ಸೀಮೆ ಎಣ್ಣೆ ಮಾರುತ್ತಿದ್ದರು. ಆದ್ದರಿಂದ ಮುಖ್ಯ ಮಂತ್ರಿಯವರು ಬೇಕಂತಲೇ ಇವರ ಬಗ್ಗೆ ಮುಚ್ಚುಮರೆ ಮಾಡುತ್ತಿದ್ದಾರೆ.

MR. DEPUTY SPEAKER —The hon. member has started an uncalled for speech. His notice for adjournment is yet to be examined. Still he has already started speaking unrestrained.

ಶ್ರೀ ವಾಟಾಳ್ ನಾಗರಾಜ್.—ನಮ್ಮ ಅಧ್ಯಕ್ಷರ ರೂಲಿಂಗ್ ಪ್ರಕಾರ ಅವರು ಲೈಸೆನ್ಸ್ ಇಲ್ಲದೆ ಸೀಮೆ ಎಣ್ಣೆ ಮಾರಿದ್ದಾರೆಂದು ರಜುವಾತಾಗಿದೆ. ಹೀಗೆ ಸರ್ಕಾರಕ್ಕೆ ಮೊಸಮಾಡತಕ್ಕ ಮನುಷ್ಯನನ್ನು ಹೇಗೆ ಫಿಲ್ಮ್ ಡೆವಲಪ್‌ಮೆಂಟ್ ಕಾರ್ಪೊರೇಶನಿಗೆ ಹಾಕಿದರೂ ಎಂದು ಕೇಳುತ್ತೇನೆ. ನಾವು ಇಷ್ಟು ಹೇಳಿದರೂ ಅವರ ಮೇಲೆ ಏನೂ ಕ್ರಮ ತೆಗೆದುಕೊಂಡಿಲ್ಲ.

MR. DEPUTY SPEAKER.—Sri Nagaraj must please sit down. Is he going to sit down or not?

(Sri Vatal Nagaraj resumed his seat)

ಶ್ರೀ ವಾಟಾಳ್ ನಾಗರಾಜ್.—ಇವತ್ತು ಸಾಮಾನ್ಯ ಒಬ್ಬ ವ್ಯಾಪಾರಿ ಲೈಸೆನ್ಸ್ ಇಲ್ಲದೆ ಏನಾದರೂ ಮಾರಿದ್ದರೆ ಅವನ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಅವನಿಗೆ ಇಲ್ಲದ ಸಲ್ಲದ ತೊಂದರೆ ಕೊಡುತ್ತಿದ್ದರು. ಈ ವ್ಯಕ್ತಿ ಪ್ರೆಸ್ಸಿನವರನ್ನು ಸಹ ಹೆದರಿಸಿದ್ದಾರೆ. ಅವರ ಬಗ್ಗೆ ಏನಾದರೂ ಪೇಪರಿನಲ್ಲಿ ಹಾಕಿದರೆ ಪೇಪರಿನವರ ಮೇಲೆ ಡಿಫ್ಯಾಮೇಶನ್ ಕೇಸ್ ಹಾಕುತ್ತೇನೆಂದು ಹೇಳಿದ್ದಾರೆ. ಆದ್ದರಿಂದ ಇದರ ಬಗ್ಗೆ ಮಂತ್ರಿಯವರು ಒಂದು ಹೇಳಿಕೆಯನ್ನು ಆದರೂ ಕೊಡಬೇಕು.

MR. DEPUTY SPEAKER.—It has its own procedure. This subject is not new. It has been debated twice or thrice with all vehemence and seriousness. The notice will be examined. Sri Nagaraj, cannot all of a sudden get provoked and make a big oration and bring Jog Falls and Niagara Falls.

ಶ್ರೀ ವಾಟಾಳ್ ನಾಗರಾಜ್.—ನಾನು ನೋಟೀಸ್ ಕಳಿಸಿ ೧೫ ದಿವಸವಾಯಿತು. ಮುಖ್ಯಮಂತ್ರಿಯವರು ಇವರನ್ನು ಶೀಲ್ಡ್ ಮಾಡುತ್ತಿದ್ದಾರೆ. ಇನ್ನೂ ಹೇಳಬೇಕಾದ ಅನೇಕ ವಿಷಯಗಳು ಇವೆ ಅವಕಾಶ ಕೊಟ್ಟರೆ ಹೇಳುತ್ತೇನೆ ಇವತ್ತು ಇಲ್ಲಿ ಇಬ್ಬರು ಮಂತ್ರಿಯವರು ಇದ್ದಾರೆ ತಾವು ಆಶ್ವಾಸನೆಯನ್ನು ಕೊಟ್ಟರೆ ಒಳ್ಳೆಯದು. ಆ ಮನುಷ್ಯ ಇವತ್ತು ಬೆಂಗಳೂರಿನಲ್ಲಿ ಒಂದು ಭೂತ ಇದ್ದ ಹಾಗೆ ಇದ್ದಾನೆ. ಆದ್ದರಿಂದ ತಮ್ಮನ್ನು ಕೇಳಿಕೊಳ್ಳುವುದೇನೆಂದರೆ ಮಾನ್ಯ ಮಂತ್ರಿಯವರು ಅದರ ಬಗ್ಗೆ ಒಂದು ಹೇಳಿಕೆಯನ್ನು ಕೊಡುವಂತೆ ಸೂಚನೆ ಕೊಡಬೇಕೆಂದು ಹೇಳುತ್ತೇನೆ.

11-30 A.M

SRI H. M. CHANNABASAPPA (Minister for Public Works and Electricity) :—Sir, the Hon. Member's contention is that he has given notice of an adjournment motion and motion of a short duration discussion. These are pending with the Speaker to be considered on merits and action taken. I think the Hon. Member will do well to await the decision of the Speaker.

MR. DEPUTY SPEAKER :—If the Hon. Member has given notice so late as this what can be done? It takes its own time

Satyagraha by ryots in Mangapura village, Sorab Taluk

ಶ್ರೀ ಸಿ. ಬೈರೇಗೌಡ :—ನಾನು ನಿನ್ನೆ ಸೊರಬ ತಾಲ್ಲೂಕಿನ ಮಂಗಾಪುರ ಗ್ರಾಮದಲ್ಲಿ ೨೦ ಜನ ಗೇಣಿ ರೈತರು ಸತ್ಯಾಗ್ರಹ ಮಾಡಿದ್ದಾರೆ ಜೈಲಿಗೆ ಹೋಗಿದ್ದಾರೆ. ಅದರ ಬಗ್ಗೆ ಒಂದು ವರದಿಯನ್ನು ಕೊಡಬೇಕೆಂದು ಕೇಳಿದ್ದರೂ ಇದುವರೆಗೆ ಅದು ಬಂದಿಲ್ಲ. ನಾನು ನಿನ್ನೆಯೂ ಕೂಡ ಇದನ್ನು ಪ್ರಸ್ತಾಪ ಮಾಡಿದ್ದೇನೆ. ಬೆಳೆ ಬೆಳೆದವರು ೧೫ ಜನ ರೈತರನ್ನು ಜಮೀನಿಗೆ ಪ್ರವೇಶಮಾಡಿದ ರೀತಿಯಲ್ಲಿ ಪೋಲೀಸಿನವರು ಪ್ರತಿಬಂಧನೆ ಮಾಡಿದ್ದಾರೆ. ಅಂತಹ ಸಮಯದಲ್ಲಿ ಸರ್ಕಾರದವರು ತೀವ್ರ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಬಹಳ ತೊಂದರೆಯಾಗುತ್ತದೆ. ಇನ್ನೊಂದು ವಿಷಯ. ಸೊರಬ ತಾಲ್ಲೂಕಿನ ಮಾಗಡಿ ಗ್ರಾಮದಲ್ಲಿ ೪೬ ಜನ ರೈತರು ಜೈಲಿನಲ್ಲಿದ್ದಾರೆ. ಅಲ್ಲಿರತಕ್ಕ ಪಹಣಿ ತಿದ್ದುಪಡಿಯಾಗಿರುವ ವಿಷಯ. ಸರ್ಕಾರದ ಅಧಿಕಾರಿಗಳ ಬೆಂಬಲದಿಂದ ಪಹಣಿಗಳನ್ನು ಅಕ್ರಮವಾಗಿ ತಿದ್ದಿದ್ದಾರೆ. ಕೆಲವು ಅಧಿಕಾರಿಗಳು ರೈತರು ತಮ್ಮ ಜಮೀನನ್ನು ಪ್ರವೇಶಮಾಡದೇ ಇರುವ ರೀತಿಯಲ್ಲಿ ಜಮೀನ್ದಾರರ ಜೊತೆಯಲ್ಲಿ ಸೇರಿಕೊಂಡು ಪೋಲೀಸಿನವರು ರೈತರಿಗೆ ತೊಂದರೆ ಕೊಡುತ್ತಿದ್ದಾರೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಕಾಗೋಡು ತಿಮ್ಮಪ್ಪ :—ಸರ್ಕಾರದವರು ಎಷ್ಟು ದಿವಸಗಳಲ್ಲಿ ರೈತರ ಪರವಾಗಿ ಪಹಣಿಗಳನ್ನು ಸರಿಪಡಿಸುತ್ತಾರೆ. ಇದು ಸಾಮೂಹಿಕವಾಗಿ ನಡೆದಿರತಕ್ಕದ್ದು, ನಾವು ಸಾಕಷ್ಟು ಮನವಿಗಳನ್ನು ಸಲ್ಲಿಸಿ ಹೇಳಿದರೂ ಕೂಡ ಅಲ್ಲಿರುವ ಅಧಿಕಾರಿಗಳು ಖುಷಿಯಾಗಿ ಆಲೆಗಾಡುವುದಿಲ್ಲ. ಅದರ ಬಗ್ಗೆ ವಿಚಾರಣೆ ಮಾಡುವುದಿಲ್ಲ. ಇಪತ್ತು ಜೈಲಿನಲ್ಲಿದ್ದಾರೆಂದು ಹೇಳುತ್ತಾರೆ. ಅಂತಹ ಸಂಬಂಧರ್ಭದಲ್ಲಿ ಇನ್ನು ಎಷ್ಟು ದಿವಸಗಳಲ್ಲಿ ಪಹಣಿಗಳನ್ನು ದುರಸ್ತುಪಡಿಸುತ್ತಾರೆ? ನಾವು ಮಕ್ಕಳು ಮರಿಗಳನ್ನು ಕಟ್ಟಿಕೊಂಡು ದುಡಿಮೆ ಮಾಡಿದರೂ ಬೆಳೆ ಹಾಳಾಗಿ ಹೋಗುತ್ತಿದೆ. ಅದರ ಬಗ್ಗೆ ಕಂದಾಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡಬೇಕು. ಬೇರೆಯವರಿಗೆ ಮಾತನಾಡಲು ನೀವು ೩-೪ ಸಾರಿ ಅವಕಾಶ ಕೊಡುತ್ತೀರಿ. ನಮಗೆ ಕೊಡುವುದಿಲ್ಲ. ನಾವು ಬಾಯಿ ಮುಚ್ಚಿಕೊಂಡು ಕೂತುಕೊಳ್ಳಬೇಕಾಗಿ ಬಂದಿದೆ ನಮಗೂ ಇಲ್ಲಿ ಗಲಾಟೆ ಮಾಡುವುದು ಬರುತ್ತದೆ.

MR. DEPUTY SPEAKER :—If any injustice or for that matter grave injustice is done, the matter has to be represented to Government in a forceful manner and that the Hon. Member has done. Simply because a notice is given under this rule or that rule, let not Hon. Members think that things will be set right There are so many motions for discussion under various rules; they have to be processeded, taken serially and considered. If such notices are to be taken, several days will have to be allotted only for them Let not the Hon. Member Sri Thimmappa think that he is slighted All the same I can assure him that due consideration will be given to his request. At the same time, if he wants the matter to be taken up as speedily as possible, let him agitate the matter with the Minister for Revenue. Let us now hear the Hon. Minister for Revenue.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಮತ್ತು ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ಸೊರಬ ತಾಲ್ಲೂಕು ಮಾಗಡಿಯಲ್ಲಿ ಪಹಣಿಗಳನ್ನು ಬದಲಾವಣೆ ಮಾಡಿರುವ ವಿಷಯಗಳನ್ನು ನನ್ನ ಗಮನಕ್ಕೆ ತಂದುಕೊಟ್ಟಿರುತ್ತಾರೆ. ಈ ವಿಚಾರವಾಗಿ ನಾನು ಜಿಲ್ಲಾಧಿಕಾರಿಗಳಲ್ಲಿ ಫೋನ್ ಮೂಲಕ ವಿಚಾರಿಸಿ ಆಫೀಸಿಗಿರತಕ್ಕ ಅನ್ಯಾಯಗಳನ್ನು ತೀವ್ರವಾಗಿ ಗಮನಕ್ಕೆ ತೆಗೆದುಕೊಂಡು, ಅವುಗಳನ್ನು ಸರಿಪಡಿಸಬೇಕೆಂದು ಹೇಳಿದೆ. ಅವರು ನನ್ನ ಜೊತೆಯಲ್ಲಿ ಹೇಳಿದ ಪ್ರಕಾರ ಪಹಣಿಗಳನ್ನು ಬದಲಾವಣೆ ಮಾಡಿರುವುದು ನಿಜವೆಂದು ಕಂಡುಬಂದಿದೆ. ಅದನ್ನು ಸರಿಪಡಿಸುತ್ತೇವೆ ಅದಾದಮೇಲೆ ಅಲ್ಲಿ ಹಾಕಿರತಕ್ಕ ಕೇಸುಗಳನ್ನ್ನು ವಾಪಸ್ಸು ತೆಗೆದುಕೊಳ್ಳುತ್ತೇವೆಂದು ತಿಳಿಸಿದ್ದಾರೆ. ಆ ವಿಷಯವನ್ನು ನಾನು ಮಾನ್ಯ ಸದಸ್ಯರಿಗೆ ತಿಳಿಸುತ್ತಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ :—ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಆಲ್ಲಿರತಕ್ಕ ತಹಶೀಲ್ದಾರರು ಏನೂ ಮಾಡುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :—ಅವರಿಗೆ ನಾಲ್ಕೈದು ಸಾರಿ ವರ್ಗವಾಗಿ ಚಾರ್ಜ್ ಆಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಗೇಣಿದಾರರ ವಿಷಯದಲ್ಲಿ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಅವರಿಗೆ ಎಷ್ಟರಮಟ್ಟಿಗೆ ಆಸಕ್ತಿ ಇದೆಯೋ ಅಷ್ಟೇ ಆಸಕ್ತಿ ನಮಗೂ ಇದೆ. ಅವರು ಹೇಳಿದ ಕೂಡಲೇ ಕ್ರಮ ತೆಗೆದುಕೊಳ್ಳದಿದ್ದರೆ ಅದಕ್ಕೆ ತಕ್ಕ ವ್ಯವಸ್ಥೆ ಮಾಡಲಾಗುತ್ತದೆ. ಈಗ ಅಧಿವೇಶನದ ಅವಧಿ ಪೂರೈಸಿದ ಕೂಡಲೇ ಮತ್ತೆ ಅವರಿಗೆ ಇಷ್ಟೇ ದಿವಸಗಳಲ್ಲಿ ಇದನ್ನು ಮಾಡಿ ಪೂರೈಸಬೇಕೆಂದು ಸೂಚನೆ ಕೊಡುತ್ತೇನೆ.

ಇನ್ನು ಮಂಗಾಪುರದ ವಿಷಯವನ್ನು ತಿಳಿಸಿದ್ದಾರೆ ಅದು ಮೊದಲು ಗಮನಕ್ಕೆ ಬರಲಿಲ್ಲ. ಮಾನ್ಯ ಸದಸ್ಯರು ಆ ವಿಷಯವನ್ನು ಹೇಳಿದ್ದಾರೆ. ಅದೂ ಕೂಡ ಏನಾಗಿದೆ ಎಂಬುದನ್ನು ಡೆಪ್ಯೂಟಿ ಕಮೀಷನರ ಜೊತೆಯಲ್ಲಿ ಮಾತನಾಡಿ ಅದಕ್ಕೆ ಎಷ್ಟರಮಟ್ಟಿಗೆ ಸಾಧ್ಯವಿದೆಯೆಂಬ ಬಗ್ಗೆ ನಿಜಾಂಶವನ್ನು ಕಂಡುಹಿಡಿದು ಕೂಡಲೇ ನೊಂದವರಿಗೆ ತಕ್ಕ ಪರಿಹಾರ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ :—ನನ್ನ ಕಾಲ್ ಅಟೆನ್‌ಷನ್ ನೋಟೀಸ್ ರಾಜ್ಯಕ್ಕೆ ಸಂಬಂಧಪಟ್ಟ ವಿಷಯ. ಸುಮಾರು ೮ ದಿನಗಳಿಂದಲೂ ನನಗೆ ಉತ್ತರ ಬರಲಿಲ್ಲ. ಅದಕ್ಕೆ ತಕ್ಷಣ ಉತ್ತರ ಕೊಡಬೇಕು. ಅವರ ಬಗ್ಗೆ ಬಾಗೇಪಲ್ಲಿ ತಹಸೀಲ್ದಾರರು ಏನು ಮಾಡಿದ್ದಾರೆ. ರೈತರು ಜಮೀನಿಗೆ ಹೋಗಿಲ್ಲವೆಂದು ನೋಟೀಸ್ ಕೊಟ್ಟಿದ್ದಾರೆ. ಇದು ಶಿವಮೊಗ್ಗ ಜಿಲ್ಲೆ ಒಂದರಲ್ಲೇ ಇಲ್ಲ. ಇಡೀ ರಾಜ್ಯದಲ್ಲಿ ನಡೆಯುತ್ತಿದೆ. ಸರ್ಕಾರ ಇದನ್ನು ಸಣ್ಣ ವಿಷಯವೆಂದು ಭಾವನೆಮಾಡಿದ್ದೇ ಆದರೆ, ಇದು ಬಹಳ ಸೀರಿಯಸ್ ಆಗುತ್ತಿದೆ. ಇವತ್ತಿನ ದಿವಸ ಲ್ಯಾಂಡ್ ರಿಫಾರಮ್ಸ್ ಬಿಲ್ ಬರುವುದಿದೆ. ಅದನ್ನು ಭೂಮಾಲೀಕರು ಅರ್ಥಮಾಡಿಕೊಂಡಿದ್ದಾರೆ. ಆಲ್ಲಿ ಗೇಣಿದಾರರಿಗೆ ರಕ್ಷಣೆ ಇಲ್ಲ. ಇದು ಕೇವಲ ಶಿವಮೊಗ್ಗ ಮತ್ತು ಕೋಲಾರ ಜಿಲ್ಲೆಗಳಿಗೆ ಸಂಬಂಧಪಟ್ಟ ವಿಷಯವಲ್ಲ. ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆ. ಇದರ ಬಗ್ಗೆ ತೀವ್ರಾಲೋಚನೆ ಮಾಡಿ, ಆಲ್ಲಿ ಎಷ್ಟು ಜನಗಳಿಗೆ ಗಲಭೆ. ಗಾಯ ಆಗಿದೆ, ಆಲ್ಲಿನ ಪರಿಸ್ಥಿತಿ ಏನು ಎಂಬುದನ್ನು ತಿಳಿದು ಇದರ ಬಗ್ಗೆ ಸೂಕ್ತ ಗಮನವನ್ನು ಕೊಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಈಗ ಈ ಭೂಶಾಸನವನ್ನು ಜಾರಿಗೆ ತರತಕ್ಕ ಸುದರ್ಭದಲ್ಲಿ ಈ ರಾಜ್ಯದಲ್ಲಿ ಬಹಳಕಡೆ ಏನೇನು ಆಗುತ್ತಿದೆಯೆಂಬುದನ್ನು ಮಾನ್ಯ ಸದಸ್ಯರು ಗಮನಕ್ಕೆ ತರುತ್ತಿದ್ದಾರೆ. ಅದನ್ನು ನಾನು ಮೊದಲೇ ಅಧಿಕಾರಿಗಳ ಮೂಲಕ ತಿಳಿದಿದ್ದೇನೆ. ಅದಕ್ಕಾಗಿ ಜಿಲ್ಲಾಧಿಕಾರಿಗಳೆಲ್ಲರೂ ಈ ವಿಷಯದಲ್ಲಿ ಕೂಡಲೆ ತಾವೇ ಜವಾಬ್ದಾರಿ ವಹಿಸಬೇಕಾಗಿದೆ. ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಪಹಣಿಗಳನ್ನು ಬದಲಾಯಿಸಿದ ಪಕ್ಷದಲ್ಲಿ ತಹಸೀಲ್ದಾರರು ಜವಾಬ್ದಾರರಾಗುತ್ತಾರೆ. ಆಗ ಪೋಲೀಸ್ ರಿಪೋರ್ಟ್ ಮೇಲೆ ತೀರ್ಮಾನ ಮಾಡಬಹುದು. ಅವರೇ ನೇರವಾಗಿ ಆಗ ತೀರ್ಮಾನ ತೆಗೆದುಕೊಳ್ಳಬಹುದೆಂದು ಸ್ಪಷ್ಟವಾಗಿದೆ. ಸರ್ಕಾರದವರು ಇದರ ಬಗ್ಗೆ ಈಗಾಗಲೇ ಹೆಚ್ಚಿನ ಆಸಕ್ತಿವಹಿಸಿ ಕೆಲಸ ಮಾಡುತ್ತಿದ್ದಾರೆ. ಗೇಣಿದಾರರು ಎಲ್ಲೆಲ್ಲಿ ಒಕ್ಕಲೆಬ್ಬಿಸುವುದಕ್ಕೆ ಪ್ರಯತ್ನ ನಡೆದಿದೆಯೋ ಅದನ್ನು ತಡೆಗಟ್ಟಬೇಕೆಂದು ಅವರಿಗೆ ಸರ್ಕ್ಯುಲೇಷನ್, ಇನ್‌ಸ್ಟ್ರಕ್ಷನ್ಸ್ ಸಹ ಕೊಡುತ್ತಿದ್ದೇವೆ.

Losses due to Rains in Madhugiri

ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನಹಳ್ಳಿ).—ಸ್ವಾಮಿ ಮೊನ್ನೆ ಮಳೆಗಾಲದಲ್ಲಿ ಆ ಮಧುಗಿರಿ ಮತ್ತು ಅದರ ಸುತ್ತಮುತ್ತಲಿರತಕ್ಕ ಗ್ರಾಮಗಳ ಜನರು ಅಧಿಕವಾದ ಮಳೆಯಿಂದ ತಮ್ಮ ಅಟ್ಟು ಮನೆ ಮಠಗಳನ್ನೆಲ್ಲಾ ಕಳೆದುಕೊಂಡಿದ್ದ ವಿಷಯವನ್ನು ಸರ್ಕಾರದವರು ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿ ನೊಂದ ಸಂತ್ರಸ್ತರಿಗೆ ಪರಿಹಾರ ನೀಡಲು ಆ ತಾಲ್ಲೂಕಿಗೆ ಹಣವನ್ನು ಕಳುಹಿಸಿದ್ದರೆ ಅಲ್ಲಿನ ಬಿ.ಡಿ.ಒ. ಮತ್ತು ಇತರೇ ಅಧಿಕಾರಿಗಳು ಒಂದಾಗಿ ಯಾರು ತಮಗೆ ದುಡ್ಡು ಕೊಡುತ್ತಾರೋ ಅಥವಾ ಲಂಚ ಕೊಡುತ್ತಾರೋ ಅಂಥವರಿಗೆ ಮಾತ್ರ ಪರಿಹಾರವನ್ನು ಕೊಟ್ಟು ಯಾರು ನಿಜವಾಗಿಯೂ ಕಷ್ಟಕ್ಕೆ ಸಿಕ್ಕಿ ಆಸ್ತಿಪಾಸ್ತಿಗಳನ್ನು ಹಾಳುಮಾಡಿಕೊಂಡಿದ್ದಾರೋ ಅಂಥವರಿಗೇನೂ ಪ್ರಯೋಜನ ಸಿಕ್ಕಿಲ್ಲ. ಯಾರಿಗೆ ಆ ಹಣ ಸೇರಬಾರದಿತ್ತೋ ಅಂಥವರಿಗೆ ಹಣ ಈ ದಿವಸ ಸೇರುತ್ತಿದೆ. ಈ ವಿಚಾರದಲ್ಲಿ ಜನರು ಮಾನ್ಯ ರೆವಿನ್ಯೂ ಮಂತ್ರಿಗಳಿಗೂ ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೂ ರಾಜ್ಯದ ಚೀಫ್ ಸೆಕ್ರೆಟರಿಗಳಿಗೂ ಅರ್ಜಿಗಳನ್ನು ಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ಆಲ್ಲಿನ ನೊಂದ ಜನರು ನನಗೂ ಕೂಡ ಈ ದಿವಸ ಒಂದು ಪತ್ರವನ್ನು ಬರೆದಿದ್ದಾರೆ. ಅಲ್ಲಿ ಬಹಳ ಅನ್ಯಾಯಗಳು ನಡೆಯುತ್ತಿವೆ. ಅದನ್ನು ಕೂಡಲೆ ಸರ್ಕಾರದವರು ತಡೆಗಟ್ಟಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಪಹಣೀ ವಿಚಾರದಲ್ಲಿ ಒಂದು ಗಹನವಾದ ವಿಷಯವನ್ನು ನಾನು ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಪಹಣೀ ವಿಚಾರದಲ್ಲಿ ತಕರಾರುಗಳು ಬಂದಾಗ ಸ್ಥಳೀಯ ಅಧಿಕಾರಿಗಳ ಆ ತಕರಾರು ಇರತಕ್ಕ ಜಾಗಗಳಿಗೆ ಹೋಗತಕ್ಕ ಸಂದರ್ಭದಲ್ಲಿ ಈ ಅಧಿಕಾರಿಗಳು ನೇರವಾಗಿ ಜಮೀನ್ದಾರರ ಮನೆಗೆ ಹೋಗಿ ಅಲ್ಲಿ 'ಚಹಾ' ಕುಡಿದು ಒಂದು ಆ ಕೇಸುಗಳನ್ನು ಅವರ ಪರವಾಗೇ ತೀರ್ಮಾನ ಕೊಡುತ್ತಿದ್ದಾರೆ. ಅಕ್ರಮ ಪಹಣಿ ದೂರುಗಳನ್ನು ಕೊಟ್ಟರೆ ಇದೇ ನ್ಯಾಯ ಜನರಿಗೆ ಸಿಕ್ಕುವುದು ? ಹೀಗೆ ಅಧಿಕಾರಿಗಳು ದುರ್ವರ್ತನೆಯಿಂದ ವರ್ತಿಸುತ್ತಿರುವುದರ ಬಗ್ಗೆ ಕೂಡಲೇ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

SRI V. N. PATIL.—As per the list of business it is put down for today discussion on private members' resolution. We are informed that one important legislative Bill, namely, the Land Reforms Bill will be introduced today. Even though it is not so far formally introduced, the papers have been sent to us and it is most disappointing thing. I request the Hon. Minister not to introduce it and to kindly ponder over the matter and introduce the same on the 14th. It is sincere request I am making. I request him to kindly bring in a still more effective legislation.

MR. DEPUTY SPEAKER.—The Hon. Member will please take his seat. I never wanted such a kind of narration.

Draught conditions in Anekal Taluk

ಶ್ರೀ ಎಂ. ಬಿ. ರಾಮಸ್ವಾಮಿ (ಆನೇಕಲ್).—ಅಧ್ಯಕ್ಷರೇ, ನಾನು ಒಂದು ಕಾಲಟೆನ್‌ಷನ್ ನೋಟೀಷನ್ನು ತಮ್ಮ ಕಡೆಗೆ ಕಳುಹಿಸಿದ್ದೆ. ಆನೇಕಲ್ ತಾಲ್ಲೂಕಿನಲ್ಲಿ ಮಳೆ ಇಲ್ಲ ಬೆಳೆ ಇಲ್ಲ. ಜನರಿಗೆ ತಿನ್ನುವುದಕ್ಕೆ ಅನ್ನ ಆಹಾರಗಳಿಲ್ಲ. ದನಕರುಗಳಿಗೆ ತಿನ್ನುವುದಕ್ಕೆ ಮೇವಿಲ್ಲ—ಕುಡಿಯುವುದಕ್ಕೆ ಕೆರೆ ಕಟ್ಟೆಗಳಲ್ಲಿ ನೀರಿಲ್ಲ ಈ ವಿಚಾರದಲ್ಲಿ ನೋಟೀಸನ್ನು ಕಳುಹಿಸಿ ಒಂದು ವಾರದ ಮೇಲಾಗಿದೆ. ಅಲ್ಲಿಯ ಜನರು ಬಹಳ ಕಷ್ಟದಲ್ಲಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ರೆವಿನ್ಯೂ ಮಂತ್ರಿಗಳಿಗೂ ಈ ವಿಚಾರದಲ್ಲಿ ಕಾಗದ ಬರೆದಿದ್ದೇನೆ. ನನಗೆ ಯಾವ ಉತ್ತರವೂ ಇಲ್ಲಿಯವರೆಗೆ ಬರಲಿಲ್ಲ. ಅಲ್ಲಿಗೆ ಸರ್ಕಾರದವರು ಕೂಡಲೇ ಆಹಾರ ಧಾನ್ಯಗಳನ್ನೂ ಮತ್ತು ಜಾನುವಾರುಗಳಿಗೆ ಹುಲ್ಲನ್ನೂ ಒದಗಿಸ ಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

MR. DEPUTY SPEAKER.—I request the Minister to pay due attention to the grievances raised by the Hon. Members and that of Sri Ramaswamy in particular. Next item.